ಸಿ.ಸಿ.900/2025 ಪಿಡಬ್ಲ್ಯೂ-1

ದಿನಾಂಕಃ 08.07.2026 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ ಬಿ.ಜೆ. ವಕೀಲರಿಂದಃ**

ನನಗೆ 400/- ರೂಗಳ ದಿನಗೂಲಿಯನ್ನು ನೀಡುತ್ತಿದ್ದರು. ನಾನು ಗ್ರಾಮೀಣ ಬ್ಯಾಂಕ್ ನ ಚೆಕ್ ಮುಖಾಂತರ ಆರೋಪಿಗೆ ಸಾಲವನ್ನು ನೀಡಿರುತ್ತೇನೆ. ಸದರಿ ಚೆಕ್ ಯಾವ ಶಾಖೆಗೆ ಸೇರಿದ್ದಾಗಿರುತ್ತದೆ ಎಂದು ನನಗೆ ತಿಳಿದಿರುವುದಿಲ್ಲ. ಕಾರ್ಮಕ್ಕಿಯ ಸುಮಿತ್ರ ಎಂಬುವವರ ಪರಿಚಯ ನನಗಿರುವುದಿಲ್ಲ. ಕೊಟ್ಟಿಗೆಹಾರದ ಗೌರಮ್ಮ ಎಂಬುವವರ ಪರಿಚಯ ನನಗಿದೆ. ಸುಮಿತ್ರ ಮತ್ತು ಗೌರಮ್ಮ ರವರ ಮುಖಾಂತರ ಆರೋಪಿಯ ವಿರುದ್ಧ ಇನ್ನು 2 ಪ್ರಕರಣಗಳನ್ನು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯು ಒಂದು ಚೆಕ್ ಮತ್ತು ಆಧಾರ್ ಕಾರ್ಡ್ ನ ಪ್ರತಿಯನ್ನು ನೀಡಿದ್ದರು. ಆರೋಪಿಗೆ ಹಣ ನೀಡಿದ ಸಮಯದಲ್ಲಿ ಜಾಮೀನುದಾರರು ಹಾಜರಿದ್ದರು. ಸದರಿಯವರನ್ನು ನಾನು ನ್ಯಾಯಾಲಯಕ್ಕೆ ಕರೆಸುತ್ತೇನೆ. ಸದರಿಯವರ ಹೆಸರು ನೆನಪಾಗುತ್ತಿಲ್ಲ. ನಾನು ಆರೋಪಿಗೆ ಹಣ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಮದುವೆಗೆಂದು ಕೂಡಿಟ್ಟಿದ್ದ ಹಣವನ್ನು ಆರೋಪಿಗೆ ನೀಡಿರುತ್ತೇನೆ. ನಾನು ಹೇಳಿದ ರೀತಿಯಲ್ಲಿ ಮದುವೆಗೆಂದು ಯಾವುದೇ ಹಣವನ್ನು ಕ್ರ್ರೂಢೀಕರಿಸಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿಯು ಕೂಲಿ ಕೆಲಸ ಮಾಡುತ್ತಾರೆ ಎಂದರೆ ಸರಿ. ನನಗೆ ಒಟ್ಟು 6 ಗಂಡು ಮಕ್ಕಳು ಮತ್ತು 3 ಹೆಣ್ಣು ಮಕ್ಕಳು. ಮೊದಲನೇ ಮಗಳ ಹೆಸರು ಜ್ಯೋತಿ.

ನಾನು ತೋಟಕ್ಕೆ ಜನರನ್ನು ಕಟ್ಟುತ್ತೇನೆ ಎಂದರೆ ಸರಿ. ನಾನು ಕಟ್ಟುವ ಜನರಿಗೆ 5 ರಿಂದ 10 ಸಾವಿರ ರೂಗವನ್ನು ಕೇಳಿದರೆ ನೀಡುತ್ತೇನೆ ಎಂದರೆ ಸರಿ. ಸದರಿ ಸಮಯದಲ್ಲಿ ಆಧಾರ್ ಕಾರ್ಡ್ ಮತ್ತು ಇತರೆ ಗುರುತಿನ ಚೀಟಿಗಳನ್ನು ಪಡೆದುಕೊಳ್ಳುತ್ತೇನೆ ಎಂದರೆ ಸರಿ. ಆ ರೀತಿಯಾಗಿ ಪಡೆದಂತಹ ಚೆಕ್ ಮತ್ತು ಆಧಾರ್ ಕಾರ್ಡ್ ಗಳನ್ನು ಇಟ್ಟುಕೊಂಡು ಸುಮಿತ್ರ ಮತ್ತು ಗೌರಮ್ಮ ಎಂಬುವವರಿಂದಲೂ ಆರೋಪಿಯ ವಿರುದ್ಧ ಪ್ರಕರಣವನ್ನು ದಾಖಲು ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯಿಂದ ಪಡೆದಂತಹ ಚೆಕ್ ನ್ನು ದುರುಪಯೋಗಪಡಿಸಿಕೊಂಡು ಗೌರಮ್ಮ ಮತ್ತು ಸುಮಿತ್ರ ಹಾಗೂ ನಾನು ಆರೋಪಿಯ ವಿರುದ್ಧ ಪ್ರಕರಣವನ್ನು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿಗೆ ನಾನು ನೀಡಿರುವ ಚೆಕ್ ನ ಪಾಸ್ ಬುಕ್ ನನ್ನ ಬಳಿ ಇದೆಯೋ ಇಲ್ಲವೋ ಎಂದು ನನ್ನ ಗಂಡನಿಗೆ ತಿಳಿದಿರುತ್ತದೆ. ನಾನು ಗೋಣೀಬೀಡುವಿನ ಗ್ರಾಮೀಣ ಬ್ಯಾಂಕ್ ನ ಮುಖಾಂತರ ವ್ಯವಹರಿಸುತ್ತೇನೆ. ನನಗೆ ತಿಂಗಳಿಗೆ ರೂ.2,000/- ಗೃಹಲಕ್ಷ್ಮೀ ಹಣ ಸಿಗುತ್ತದೆ. ಸದರಿ ಹಣವು ಗ್ರಾಮೀಣ ಬ್ಯಾಂಕ್ ನ ಖಾತೆಗೆ ಬರುತ್ತದೆ. ಸದರಿ ಬ್ಯಾಂಕ್ ನ ಖಾತೆಯ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ. ಗೃಹಲಕ್ಷ್ಮೀ ಹಣವು ಗೋವಿಂದಪುರ ತಾಂಡದ, ಹರಪ್ಪನಹಳ್ಳಿ ತಾಲ್ಲೂಕಿನ ಶಾಖೆಗೆ ಬರುತ್ತದೆ.

ನಾನು ಆರೋಪಿಗೆ ಚೆಕ್ ನ ಮುಖಾಂತರ ಹಣವನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿದಷ್ಟು ಹಣವನ್ನು ಆರೋಪಿಗೆ ಕೊಡಲು ನಾನು ಶಕ್ತಳಾಗಿರುವುದಿಲ್ಲ ಎಂದರೆ

ಸರಿಯಲ್ಲ. ನನ್ನ ಮತ್ತು ಆರೋಪಿಯ ನಡುವೆ ಯಾವುದೇ ವ್ಯವಹಾರ ನಡೆದಿರುವುದಿಲ್ಲ ಮತ್ತು ಆರೋಪಿಯನ್ನು ನಾನು ಕೂಲಿಯಾಗಿ ಕರೆದುಕೊಂಡು ಹೋಗಲು ಪಡೆದುಕೊಂಡ ಭದ್ರತೆಯ ಚೆಕ್‌ನ್ನು ಹಿಡಿದು ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯೊಟ್ಟಿಗೆ ವ್ಯವಹರಿಸಲು ನನ್ನ ಗಂಡ ಹಣ ನೀಡಿದ್ದರು ಎಂಬ ವಿಷಯ ಸುಳ್ಳು ಎಂದರೆ ಸರಿಯಲ್ಲ. ನಾನು ನನ್ನ ಗಂಡನ ಮಾತು ಕೇಳಿ ಆರೋಪಿಯ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ.,
ಮೂಡಿಗೆರೆ.